# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 24 ಪ್ರಾ.ಸಾ. : 16**

| | | |
|---|---|---|
| ಸಾಕ್ಷಿಯ ಹೆಸರು | : | ವಿನಯ್ ಶಾಂತಾ ನಾಗೇಕರ್ |
| ತಂದೆಯ ಹೆಸರು | : | ಶಾಂತಾ ನಾಗೇಕರ್ |
| ವಯಸ್ಸು | : | 45 ವರ್ಷ |
| ಕೆಲಸ | : | ವ್ಯವಹಾರ |
| ವಾಸ | : | ಕಿನ್ನರ, ಕಾರವಾರ |

**ದಿನಾಂಕಃ 28-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-1 ದಯಾನಂದ ಬೋಗ್ಲೆ ನನಗೆ ಗೊತ್ತು, ಮೃತ ಪ್ರೇಮಕುಮಾರ ಸಹ ನನಗೆ ಗೊತ್ತು, ಆತ ಚಾಸಾ-1 ರವರ ಅಳಿಯ. ಈಗ ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿಗಳು ನನಗೆ ಗೊತ್ತು. 2000 ನೇ ಇಸ್ವಿಯಿಂದ 17 ವರ್ಷಗಳ ಕಾಲ ಕಾರವಾರದ ಪೋರ್ಟ ಡಿಪಾರ್ಟಮೆಂಟ್ ನಲ್ಲಿ ವಾಹನದ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಅದೇ ರೀತಿ ಚಾಸಾ-1 ರವರು ಸಹ ಪೋರ್ಟ ಡಿಪಾರ್ಟಮೆಂಟ್ ನಲ್ಲಿ ವಾಹನದ ಚಾಲಕನಾಗಿ ಕೆಲಸ ಮಾಡಿರುತ್ತಾರೆ. 1 ಮತ್ತು 2 ನೇ ಆರೋಪಿಗಳು ಶಿಪ್ಪಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮೃತ ಪ್ರೇಮಕುಮಾರ ಪೋರ್ಟ ಡಿಪಾರ್ಟಮೆಂಟ್ ನ ವಸತಿಗೃಹದಲ್ಲಿ ವಾಸವಾಗಿದ್ದರು. ಈಗ ನ್ಯಾಯಾಲಯದ ಮುಂದಿರುವ 4 ನೇ ಆರೋಪಿಯು ಸಹ ನನಗೆ ಗೊತ್ತು, ಅವರ ಮನೆಯೂ ಸಹ ಪೋರ್ಟ ಡಿಪಾರ್ಟಮೆಂಟ್ ನ ವಸತಿಗೃಹದಲ್ಲಿ ಇರುತ್ತದೆ. ವಾಹನ ಚಾಲಕ ಕೆಲಸ ಬಿಟ್ಟ ನಂತರ, ನಾನು ಈಗ ರಿಕ್ಷಾ ಚಾಲನೆ ಮಾಡುತ್ತಿದ್ದೇನೆ.

2. ದಿನಾಂಕಃ 23-10-2018 ರಂದು ನಾನು ಕಾರವಾರದಲ್ಲಿ ರಿಕ್ಷಾ ಚಾಲನೆ ಮಾಡುತ್ತಿದ್ದಾಗ, ರಿಕ್ಷಾ ಡ್ರೈವರ್ ಗಳು ಪ್ರೇಮಕುಮಾರನ ಕೊಲೆಯಾಗಿದೆ ಎಂದು ಮಾತನಾಡಿಕೊಳ್ಳುತ್ತಿದ್ದರು. ನಂತರ, ನಾನು ಹಾಗೂ ರಿಕ್ಷಾ ಡ್ರೈವರ್ ಗಳು ಸೇರಿ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ಅಲ್ಲಿಗೆ ಹೋದ ನಂತರ, ಪೋಲೀಸರು ಆರೋಪಿಗಳನ್ನು ಉಳವಿಗೆ

ಕರೆದುಕೊಂಡು ಹೋದರು ಎಂದು ವಿಚಾರ ತಿಳಿದುಬಂತು. ಪ್ರೇಮಕುಮಾರನ ಕೊಲೆಗೆ ಸಂಬಂಧಿಸಿದಂತೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಹಾಗೂ ನಾನು ಪೋಲೀಸರ ಬಳಿ ಯಾವುದೇ ಹೇಳಿಕೆ ಕೊಟ್ಟಿಲ್ಲ. ಈಗ ನ್ಯಾಯಾಲಯದ ವಿ.ಸಿ. ಯ ಮುಂದಿರುವ 3 ನೇ ಆರೋಪಿಯನ್ನು ನಾನು ನೋಡಿರುವುದಿಲ್ಲ. ಅದೇ ರೀತಿ 4 ಮತ್ತು 5 ನೇ ಆರೋಪಿಗಳ ಬಗ್ಗೆಯೂ ಸಹ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

3. ಮೃತ ಪ್ರೇಮಕುಮಾರನು ಕಾರವಾರದ ಬೈತಕೋಲ್ ನ ಬಂದರಿನಲ್ಲಿ ಶಿಪ್ಪಿಂಗ್ ಏಜನ್ಸಿಯನ್ನು ಮಾಡುತ್ತಿದ್ದ ಎಂದರೆ, ಸಾಕ್ಷಿಯು ಪ್ರೇಮಕುಮಾರನು ಶಿಪ್ಪಿಂಗ್ ಏಜನ್ಸಿ ನಡೆಸುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಪ್ರೇಮಕುಮಾರ ಹಾಗೂ 1 ನೇ ಆರೋಪಿ ಜೊತೆಗೆ ಇರುತ್ತಿದ್ದರು ಎಂದು ನುಡಿಯುತ್ತಾರೆ. ದಿನಾಂಕಃ 16-10-2018 ರಂದು ನಾನು ನನ್ನ ರಿಕ್ಷಾದಲ್ಲಿ ಕಾರವಾರದ ಬಸ್ ಸ್ಟ್ಯಾಂಡ್ ನಿಂದ 2 ಜನ ಪ್ರಯಾಣಿಕರನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿ ಪ್ರಯಾಣಿಕರನ್ನು ಬಿಟ್ಟು, ಜಿಲ್ಲಾಸ್ಪತ್ರೆಯ ಕಂಪೌಂಡ್ ಬಳಿ ರಸ್ತೆಯ ಮೇಲೆ ನನ್ನ ರಿಕ್ಷಾವನ್ನು ನಿಲ್ಲಿಸಿಕೊಂಡು ಪ್ರಯಾಣಿಕರಿಗಾಗಿ ಕಾಯುತ್ತಿದ್ದೆ ಎಂದರೆ, ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ನಿಂತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ 2 ನೇ ಆರೋಪಿ ಒಂದು ಬೂದು ಬಣ್ಣದ ಜೆನ್ ಕಾರಿನ ಬಳಿ ನಿಂತುಕೊಂಡು ಯಾರೋ ಬರುವಿಕೆಗಾಗಿ ಕಾಯುತ್ತಿದ್ದ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಆ ಸಮಯದಲ್ಲಿ ಮೃತ ಪ್ರೇಮಕುಮಾರ ತನ್ನ ದ್ವಿಚಕ್ರ ವಾಹನದಲ್ಲಿ ಕಾರವಾರದ ಕಡೆಯಿಂದ ಬಂದು, ಜಿಲ್ಲಾಸ್ಪತ್ರೆಯ ಕಂಪೌಂಡ್ ಒಳಗೆ ಹೋಗಿ ತನ್ನ ದ್ವಿಚಕ್ರ ವಾಹನವನ್ನು ನಿಲ್ಲಿಸಿ, ನನ್ನ ರಿಕ್ಷಾ ಹತ್ತಿರ ಬಂದು ನನಗೆ ಕೈ ತೋರಿಸಿದ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಆನಂತರ, ಪ್ರೇಮಕುಮಾರ ಅಲ್ಲಿಯೇ ನಿಂತಿದ್ದ 2 ನೇ ಆರೋಪಿಯ ಬಳಿ ಮಾತನಾಡುತ್ತಿದ್ದ ಎಂದರೆ, ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಆನಂತರ, 2 ನೇ ಆರೋಪಿಯು ಪ್ರೇಮಕುಮಾರನನ್ನು ತನ್ನ ಜೆನ್ ಕಾರಿನಲ್ಲಿ ಕರೆದುಕೊಂಡು,

ಆಸ್ಪತ್ರೆಗೆ ಮುಂದಿನ ರಸ್ತೆಯಿಂದ ಮಾರುತಿ ದೇವಸ್ಥಾನಕ್ಕೆ ಕರೆದುಕೊಂಡು ಹೋದ ಎಂದರೆ, ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಆಗ ಸಮಯ ಮಧ್ಯಾಹ್ನ 2.00 ಗಂಟೆ ಆಗಿತ್ತು ಎಂದರೆ, ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

5. ದಿನಾಂಕಃ 23-10-2018 ರಂದು ನಾವು ಠಾಣೆಗೆ ಹೋದಾಗ, ಪೋಲೀಸರ ಬಳಿ ವಿಚಾರಿಸಿದಾಗ, ಪ್ರೇಮಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ 2 ನೇ ಆರೋಪಿಯು ತನ್ನ ಜೆನ್ ಕಾರಿನಲ್ಲಿ ಪ್ರೇಮಕುಮಾರನನ್ನು ಜಿಲ್ಲಾಸ್ಪತ್ರೆ ಕಡೆಯಿಂದ ಆಕಳಗವಿ ಕಾಡಿಗೆ ಕರೆದುಕೊಂಡು ಹೋಗಿ, ಅಲ್ಲಿ ಆತನ ಸಂಬಂಧಿಯಾದ 3 ನೇ ಆರೋಪಿಯೊಂದಿಗೆ ಸೇರಿ ತಮ್ಮಲ್ಲಿದ್ದ ಕತ್ತಿಯಿಂದ ಕಡಿದು, ಕೊಲೆ ಮಾಡಿ, ಹೆಣವನ್ನು ಅಲ್ಲಿಯೇ ಬಿಸಾಡಿ ಬಂದಿರುತ್ತಾರೆ ಎಂದು ತಿಳಿಸಿದರು ಎಂದರೆ, ಸಾಕ್ಷಿಯು ಕೊಲೆಯಾದ ವಿಷಯ ಮಾತ್ರ ತಿಳಿಯಿತು, ಆದರೆ ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ.

6. ಆನಂತರ, ದಿನಾಂಕಃ 25-10-2018 ರಂದು ಪ್ರೇಮಕುಮಾರನನ್ನು ಕೊಲೆ ಮಾಡಿದ ಆರೋಪಿತರು ಪೋಲೀಸರ ವಶದಲ್ಲಿದ್ದಾರೆ ಎಂದು ಗೊತ್ತಾಗಿ, ನಾನೂ ಸಹ ಪೋಲೀಸ್ ಠಾಣೆಗೆ ಹೋಗಿ, ಅಲ್ಲಿ ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಹಾಗೂ ನ್ಯಾಯಾಲಯದ ವಿ.ಸಿ. ಯಲ್ಲಿ ಕಾಣುತ್ತಿರುವ 3 ನೇ ಆರೋಪಿಯನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ "ದಿನಾಂಕಃ 16-10-2018 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ 2 ನೇ ಆರೋಪಿಯು ತನ್ನ ಜೆನ್ ಕಾರಿನಲ್ಲಿ ಪ್ರೇಮಕುಮಾರನನ್ನು ಆಸ್ಪತ್ರೆ ಕಡೆಯಿಂದ ಕರೆದುಕೊಂಡು ಹೋಗಿದ್ದನ್ನು ನೋಡಿದ ಬಗ್ಗೆ" ಹಾಗೂ ಪ್ರೇಮಕುಮಾರನ ಕೊಲೆಯಾದ ವಿಷಯ ತಿಳಿದು, ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರೇಮಕುಮಾರ ಹಾಗೂ 1 ನೇ ಆರೋಪಿಯ ನಡುವೆ ಶಿಪ್ಪಿಂಗ್ ವ್ಯವಹಾರಕ್ಕೆ ಸಂಬಂಧಿಸಿದಂತೆ, ವೈಮನಸ್ಸು ಉಂಟಾಗಿ, 1 ನೇ ಆರೋಪಿಯು ಪ್ರೇಮಕುಮಾರನನ್ನು ಕೊಲೆ ಮಾಡಲು ಉದ್ದೇಶಿಸಿ, 2 ನೇ ಆರೋಪಿಯೊಂದಿಗೆ ಸೇರಿ, ಒಳಸಂಚು ರೂಪಿಸಿ, ಆನಂತರ 2 ಮತ್ತು 3 ನೇ ಆರೋಪಿಗಳು ಪ್ರೇಮಕುಮಾರನನ್ನು ಆಕಳಗವಿ ಅರಣ್ಯ ಪ್ರದೇಶದಲ್ಲಿ ಕೊಲೆ ಮಾಡಿದ ವಿಷಯವನ್ನು ನಾನು ತಿಳಿದುಕೊಂಡು, ಮೇಲೆ ಹೇಳಿದ ಹೇಳಿಕೆಯಲ್ಲಿ ಈ ವಿಷಯವನ್ನು ಸಹ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-46 ಎಂದು ಗುರುತಿಸಲಾಯಿತು.

7. 2018 ನೇ ಇಸ್ವಿಯಲ್ಲಿ 5 ನೇ ಆರೋಪಿಯು 1 ನೇ ಆರೋಪಿಯ ಬಳಿ ಕೆಲಸ ಮಾಡುತ್ತಿದ್ದ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ರಿಂದ 3 ನೇ ಆರೋಪಿತರು ಪ್ರೇಮಕುಮಾರನನ್ನು ಕೊಲೆ ಮಾಡಿದ ವಿಷಯ 4 ಮತ್ತು 5 ನೇ ಆರೋಪಿತರಿಗೆ ಗೊತ್ತಿದ್ದರೂ ಸಹ, ಸದ್ರಿ ವಿಷಯವನ್ನು ಪೋಲೀಸರಿಗೆ ಹೇಳದೇ, ವಿಷಯವನ್ನು ಬಚ್ಚಿಟ್ಟು ಅವರನ್ನು ಕೊಲೆ ಅಪರಾಧದಿಂದ ರಕ್ಷಿಸಿರುತ್ತಾರೆ ಹಾಗೂ ಪ್ರೇಮಕುಮಾರನ ಕೊಲೆಯಾದ ನಂತರ, 4 ನೇ ಆರೋಪಿಯು 1 ನೇ ಆರೋಪಿಯನ್ನು ಕಾರವಾರದಿಂದ ಗೋವಾಕ್ಕೆ ಕರೆದುಕೊಂಡು ಹೋಗಿ ಬಿಟ್ಟು, ಆತನು ತಲೆಮರೆಸಿಕೊಳ್ಳಲು ಸಹಾಯ ಮಾಡಿದ ಬಗ್ಗೆ ತಿಳಿದು, ನಾನು ದಿನಾಂಕಃ 08-12-2018 ರಂದು ಪೋಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಮರು ಹೇಳಿಕೆಯನ್ನು ನಿಪಿ-47 ಎಂದು ಗುರುತಿಸಲಾಯಿತು. ನಿಪಿ-3 ಪೋಟೋದಲ್ಲಿರುವ ದ್ವಿಚಕ್ರ ವಾಹನ ಮೃತ ಪ್ರೇಮಕುಮಾರನಿಗೆ ಸೇರಿದ್ದು ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಮು.ಮಾ. 11 ನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ, ಎಲ್ಲಾ ಆರೋಪಿಗಳು ನನಗೆ ಪರಿಚಯವಿರುವ ಕಾರಣ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

8. ಮೃತ ಪ್ರೇಮಕುಮಾರ ಹಾಗೂ 1 ನೇ ಆರೋಪಿಗೆ ಯಾವುದೇ ಸಂಪರ್ಕ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ ಪ್ರೇಮಕುಮಾರ ಒಟ್ಟಿಗೆ ಇರುವುದನ್ನು ನಾನು ಎಂದಿಗೂ ನೋಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

9. ಚಾಸಾ-1 ದಯಾನಂದ ಬೋಗ್ಲೆ ಯವರು ನನಗೆ ಪರಿಚಯ ಇರುವ ಕಾರಣ, ಅವರು ನನ್ನನ್ನು ಪೋಲೀಸ್ ಠಾಣೆಗೆ ಸಾಕ್ಷಿ ನುಡಿಯುವಂತೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನಾನು ಚಾಸಾ-1 ದಯಾನಂದ ಬೋಗ್ಲೆ ಯವರೊಂದಿಗೆ ಎಂದಿಗೂ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. 2 ನೇ ಆರೋಪಿಯ ಪರಿಚಯ ಇಲ್ಲ ಹಾಗೂ ಆತನನ್ನು ಕಾರವಾರದಲ್ಲಿ ಎಲ್ಲಿಯೂ ನೋಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ